# ದಿ. ಜಮಖಂಡಿ ಅರ್ಬನ್ ಕೋ–ಆಪ್ ಬ್ಯಾಂಕ ಲಿ., ಜಮಖಂಡಿ.

## ವಾರ್ಷಿಕ ಸರ್ವಸಾಧಾರಣಾ ಸಭೆಯ ನೋಟೀಸು

**ದಿ. ಜಮಖಂಡಿ ಅರ್ಬನ್ ಕೋ–ಆಪ್ ಬ್ಯಾಂಕ ಲಿ., ಜಮಖಂಡಿ** ಇದರ ಸನ್ 2024–25 ನೇ ಸಾಲಿನ 85 ನೇ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ರವಿವಾರ ದಿನಾಂಕ: 17–08–2025 ರಂದು ಮುಂಜಾನೆ 11–00 ಗಂಟೆಗೆ **"ಬಸವ ಭವನ" ಬಸ್‌ಸ್ಟ್ಯಾಂಡ ರೋಡ, ಜಮಖಂಡಿಯಲ್ಲಿ** ಕರೆಯಲಾಗಿದೆ. ತಾವುಗಳು ಸಭೆಗೆ ಸಕಾಲಕ್ಕೆ ಬರಬೇಕಾಗಿ ವಿನಂತಿ.

### ಸಭೆಯ ಮುಂದಿನ ವಿಷಯಗಳು

1. ದಿನಾಂಕ 27–07–2024 ರಂದು ನಡೆದ ಸರ್ವಸಾಧಾರಣ ಸಭೆಯ ಗೊತ್ತುವಳಿಗಳನ್ನು ಓದಿ ದೃಢೀಕರಿಸುವುದು.
2. ಸನ್ 2024–25 ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಪರಿಶೀಲಿಸುವುದು ಹಾಗೂ ಮುಂದಿನ ವರ್ಷದ ಕಾರ್ಯ ಯೋಜನೆಗೆ ಅನುಮೋದನೆ ನೀಡುವುದು.
3. ಸನ್ 2024–25 ನೇ ಸಾಲಿನ ಲೆಕ್ಕಪರಿಶೋಧನೆಯ ವರದಿ ಹಾಗೂ ವರದಿಗೆ ತಯಾರಿಸಿರುವ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು.
4. ಸನ್ 2024–25 ನೇ ಸಾಲಿನ ಸಾಲಾಸ್ತಿ ಪತ್ರಿಕೆ, ಲಾಭ–ಹಾನಿ ಪತ್ರಿಕೆಗಳಿಗೆ ಮಂಜೂರಿ ನೀಡುವುದು.
5. ನಿರ್ದೇಶಕ ಮಂಡಳಿಯಿಂದ ಸೂಚಿಸಲ್ಪಟ್ಟ ಲಾಭದ ಹಂಚುವಿಕೆಗೆ ಮಂಜೂರು ನೀಡುವುದು.
6. ಸನ್ 2024–25 ನೇ ವರ್ಷಕ್ಕೆ ಅಂದಾಜಿಸಲಾದ ವೆಚ್ಚಕ್ಕಿಂತ ಪ್ರತ್ಯಕ್ಷ ವೆಚ್ಚ ಹೆಚ್ಚಾಗಿದ್ದು ಅವುಗಳಿಗೆ ಮಂಜೂರಿ ನೀಡುವುದು.
7. ಸನ್ 2025–26 ನೇ ವರ್ಷದ ಸಲುವಾಗಿ ಉತ್ಪನ್ನ ಹಾಗೂ ವೆಚ್ಚದ ಮುಂಗಡ ಪತ್ರವನ್ನು ಮಂಜೂರು ಮಾಡುವುದು.
8. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ತೆಗೆದು ಹಾಕಿರುವ ಯಾದಿಯನ್ನು ಪರಿಶೀಲಿಸುವುದು.
9. ವಸೂಲಾಗದೆಂದು ಪರಿಗಣಿಸಿದ ಕರಡು ಸಾಲಗಳ ಬಗ್ಗೆ ಪರಿಶೀಲಿಸುವುದು.
10. ಬ್ಯಾಂಕಿನ ಸದಸ್ಯರಿಂದ ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ವಿಮರ್ಶೆ.
11. ಬ್ಯಾಂಕಿನ ನಿರ್ದೇಶಕರು ಮತ್ತು ಸಂಬಂಧಿಕರು ಪಡೆದಿರುವ ಸಾಲಗಳ ಪರಿಶೀಲನೆ ಮತ್ತು ಸುಸ್ತಿಯಾಗಿದ್ದಲ್ಲಿ ವಸೂಲಾತಿಗೆ ಕೈಗೊಂಡಿರುವ ಕ್ರಮದ ಬಗ್ಗೆ ಪರಿಶೀಲನೆ.
12. ಮೆ॥ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಬರತಕ್ಕ ಇನ್ನಿತರ ವಿಷಯಗಳು.

### ಸದಸ್ಯರು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು

1. ಬ್ಯಾಂಕು ಒದಗಿಸುವಂತೆ ಪ್ರತಿ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳ ಅಥವಾ ಸೌಲಭ್ಯಗಳ ಪ್ರಮಾಣವು ಕೆಳಗಿನಂತಿರತಕ್ಕದ್ದು.
   * ಸದಸ್ಯನು ಹೊಂದಿರತಕ್ಕ ಕನಿಷ್ಠ ಶೇರು ಬಂಡವಾಳವು 500/– ರೂಪಾಯಿಗಳು.
   * ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು 2500/– ರೂಪಾಯಿಗಳು ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ .
   * ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ ವ್ಯವಹಾರಗಳ ಸಂಖ್ಯೆಯು ಒಂದು (1) ಇರತಕ್ಕದ್ದು.
2. ಮೇಲೆ ತಿಳಿಸಿದ ಠೇವಣಿಯು ಸದಸ್ಯನ ವರ್ಷವಿಡಿ ಬ್ಯಾಂಕಿನಲ್ಲಿ ತೊಡಗಿಸಿದ ಎಲ್ಲಾ ತರಹದ ಠೇವಣಿ (ತಗಾದೆ ಮತ್ತು ಅವಧಿ) ಗಳನ್ನು ಒಳಗೊಂಡ ಒಟ್ಟು ಮೊತ್ತ ಆಗಿರತಕ್ಕದ್ದು.
3. ಭಾರತೀಯ ರಿಝರ್ವ ಬ್ಯಾಂಕು ನೀಡಿರುವ **ನಿಮ್ಮ ಗ್ರಾಹಕನನ್ನು ತಿಳಿಯಿರಿ** (ಸಿ.ಕೆ.ವೈ.ಸಿ) ನಿರ್ದೇಶನವನ್ನು ಬ್ಯಾಂಕಿನ ಪ್ರತಿ ಸದಸ್ಯನಿಗೆ ಅನ್ವಯಿಸತಕ್ಕದ್ದು.
4. ಸಾಲದ ಮೊತ್ತವು ಬ್ಯಾಂಕು ಮಂಜೂರು ಮಾಡಿ ಸದಸ್ಯನು ಉಪಯೋಗಿಸಿಕೊಂಡ ಸಾಲದ ಮಿತಿಯಾಗಿರತಕ್ಕದ್ದು ಇದು ಇಡೀ ಸಾಲದ ಅವಧಿಗೆ ಅನ್ವಯವಾಗತಕ್ಕದ್ದು.

### :ವಿಶೇಷ ಸೂಚನೆಗಳು:

1. ಉಪನಿಯಮಗಳನ್ನು ಅನುಸರಿಸಿ ಯಾವುದಾದರು ಮಾಹಿತಿ ಬೇಕಾಗಿದ್ದಲ್ಲಿ ಪ್ರಧಾನ ವ್ಯವಸ್ಥಾಪಕರನ್ನು ಸಂಪರ್ಕಿಸಲು ವಿನಂತಿ.
2. ಸರ್ವ ಸಾಧಾರಣ ಸಭೆಗೆ ಬರುವಾಗ ನೋಟಿಸಿನ ಪ್ರತಿ ಅಥವಾ ಗುರುತಿನ ಚೀಟಿಯನ್ನು ತಪ್ಪದೇ ತರಬೇಕು.
3. ಬ್ಯಾಂಕಿನ ಸದಸ್ಯನು ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾ ಸಭೆಗೆ ಹಾಜರಾಗದಿದ್ದಲ್ಲಿ ಮತ್ತು ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿ ಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂಥ ಸದಸ್ಯನು ಒಂದು ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.
4. ಇದುವರೆಗೆ ಗುರುತಿನ ಚೀಟಿ ಒಯ್ಯದೆ ಇರುವ ಸದಸ್ಯರು ತಮ್ಮ ಎರಡು ಸ್ಟಾಂಪ ಸೈಜ ಪೋಟೊ ಆಧಾರ ಕಾರ್ಡ ಝರಾಕ್ಸ ಪ್ರತಿ ಪೂರೈಸಿ ತಮ್ಮ ಗುರುತಿನ ಚೀಟಿಯನ್ನು ಒಯ್ಯಬೇಕು ಮತ್ತು ಹಿಂದಿನ ವರ್ಷದ ಲಾಭಾಂಶವನ್ನು ಒಯ್ಯದೆ ಇರುವ ಸದಸ್ಯರು ಒಯ್ಯಬೇಕಾಗಿ ವಿನಂತಿ. ಲಾಭಾಂಶ ಘೋಷಿಸಿದ ಮೂರು ವರ್ಷಗಳವರೆಗೆ ಒಯ್ಯದೇ ಇದ್ದಲ್ಲಿ ಲಾಭಾಂಶವನ್ನು ಸಹಕಾರ ಕಾಯ್ದೆ/ಬ್ಯಾಂಕಿನ ಉಪವಿಧಿ ಪ್ರಕಾರ ಕಾಯ್ದಿಟ್ಟ ನಿಧಿಗೆ ವರ್ಗಾವಣೆ ಮಾಡಲಾಗುದು.
5. ಬ್ಯಾಂಕಿನ ಉಪವಿಧಿಗಳ ಹಾಗೂ ಭಾರತೀಯ ರಿಝರ್ವ ಬ್ಯಾಂಕಿನ ನಿರ್ದೇಶನದ ಪ್ರಕಾರ ಪ್ರತಿಯೊಬ್ಬ ಸದಸ್ಯರು ತಮ್ಮ ಸದಸ್ಯತ್ವದ ಖಾತೆಗೆ ಸಿ.ಕೆ.ವಾಯ್.ಸಿ ಮಾಹಿತಿಗಳನ್ನು ಆಧುನೀಕರಿಸುವುದು ಅತ್ಯವಶ್ಯವಾಗಿರುತ್ತದೆ. ನಮ್ಮ ಬ್ಯಾಂಕಿನ ಎಲ್ಲಾ ಸದಸ್ಯರು ತಮ್ಮ ಸಿ.ಕೆ.ವಾಯ್.ಸಿ ಮಾಹಿತಿಯನ್ನು ಬ್ಯಾಂಕಿನ ಕಛೇರಿ ವೇಳೆಯಲ್ಲಿ ಬ್ಯಾಂಕಿಗೆ ಬಂದು ಪೂರೈಸಬೇಕಾಗಿ ವಿನಂತಿ.
6. ಸಭೆಯಲ್ಲಿ ಏನಾದರೂ ಪ್ರಶ್ನೆ ಕೇಳುವುದಿದ್ದಲ್ಲಿ ಸಭೆಯ ದಿನಾಂಕಕ್ಕಿಂತ ಐದು ದಿವಸ ಮುಂಚಿತವಾಗಿ ಪ್ರಧಾನ ವ್ಯವಸ್ಥಾಪಕರಿಗೆ ಲಿಖಿತ ಮುಖಾಂತರ ತಿಳಿಸತಕ್ಕದ್ದು.

**ವಿ. ಸೂ:** ಸನ್ 2020–21, 2021–22 ಮತ್ತು 2022–23, 2023–24ನೇ ಸಾಲುಗಳ ಲಾಭಾಂಶ ಒಯ್ಯುವ ದಿನಾಂಕ ಮುಗಿಯಲಿದ್ದು. ಆದ ಕಾರಣ ಲಾಭಾಂಶ ಒಯ್ಯದೇ ಇರುವ ಸದಸ್ಯರು ಸದರಿ ಸಾಲಿನ ಲಾಭಾಂಶವನ್ನು ಇಲ್ಲಿ ಸೂಚಿಸಿದಂತೆ ಕ್ರಮಬದ್ಧವಾಗಿ ದಿನಾಂಕ 15–09–2025 ಹಾಗೂ 11–09–2027 ರ ಒಳಗಾಗಿ ಬ್ಯಾಂಕಿಗೆ ಬಂದು ಪಡೆದುಕೊಳ್ಳಬೇಕು. ಇಲ್ಲದಿದ್ದಲ್ಲಿ ಕಾಯ್ದಿಟ್ಟ ನಿಧಿಗೆ ವರ್ಗಾವಣೆ ಮಾಡಲಾಗುವುದು ತಿಳಿಯಿರಿ.

| **ಶ್ರೀ ರಾಹುಲ್ ಎಸ್. ಕಲೂತಿ** | **ಶ್ರೀ ಎಮ್. ಎಮ್. ಪಾರ್ಥನಳ್ಳಿ** | **ಶ್ರೀ ಎಸ್. ಆರ್. ತುಪ್ಪದ** |
|---|---|---|
| ಅಧ್ಯಕ್ಷರು | ಉಪಾಧ್ಯಕ್ಷರು | ಪ್ರಧಾನ ವ್ಯವಸ್ಥಾಪಕರು |

ಇವರಿಂದ

**ದಿ. ಜಮಖಂಡಿ ಅರ್ಬನ್ ಕೋ–ಆಪ್ ಬ್ಯಾಂಕ ಲಿ.,**
ನೂತನ ಪ್ರಧಾನ ಕಛೇರಿ, ಎ.ಪಿ.ಎಮ್.ಸಿ ಯಾರ್ಡ,
ಗಿರೀಶ ನಗರ, **ಜಮಖಂಡಿ–587301** ಜಿ॥ ಬಾಗಲಕೋಟೆ
**ಮೋ: 9902459109, 9986667470**

BOOK POST

ಗೆ,
ಶ್ರೀಮತಿ/ಶ್ರೀ ____________________

____________________

____________________

Shri Somaling, JKD-9900650952